# ‘ಡೆಬಿಟ್’ ಇಲ್ಲದೆ ಗೂಗಲ್ ಪೇ ಬಳಸಿ

ಡಿಜಿಟಲ್ ಪಾವತಿ ಆ್ಯಪ್‌ಗಳ ಪಿನ್ ನಮೂದಿಸಲು ಹಾಗೂ ಅದನ್ನು ಬದಲಾವಣೆ ಮಾಡಲು ಯುಪಿಐ ಪಿನ್ ಕಡ್ಡಾಯ. ಅಂತೆಯೇ ಯುಪಿಐ ಆಧಾರಿತವಾಗಿ ಕಾರ್ಯನಿರ್ವಹಿಸುವ ಗೂಗಲ್ ಪೇ ಬಳಕೆಗೆ ಡೆಬಿಟ್ ಕಾರ್ಡ್ (ಎಟಿಎಂ) ಅತ್ಯಗತ್ಯ. ಆದರೀಗ, ಕೇವಲ ಆಧಾರ್ ಕಾರ್ಡ್ ಇದ್ದರೆ ಸಾಕು, ಯುಪಿಐ ಪಿನ್ ಬದಲಾವಣೆ ಜೊತೆಗೆ ಗೂಗಲ್ ಪೇ ಅನ್ನು ಸಲೀಸಾಗಿ ಬಳಸಬಹುದಾಗಿದೆ.

ಡೆಬಿಟ್ ಕಾರ್ಡ್ ಸಹಾಯವಿಲ್ಲದೇ ಯುಪಿಐ ಖಾತೆಯನ್ನು ಬದಲಾವಣೆ ಮಾಡುವ, ಕ್ರಿಯೇಟ್ ಮಾಡಿ ಆ್ಯಕ್ಟಿವೇಟ್ ಮಾಡುವ ಸೌಲಭ್ಯವನ್ನು ಗೂಗಲ್ ಪೇ ಸಕ್ರಿಯಗೊಳಿಸಿದೆ. ಗೂಗಲ್ ಪೇಗೆ ಆಧಾರ್ ನಂಬರ್ ಮೂಲಕ ಸೈನ್ ಇನ್ ಆಗಬಹುದಾಗಿದ್ದು, ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ (ಎನ್‌ಪಿಸಿಐ) ಈ ವಿಧಾನಕ್ಕೆ ಒಪ್ಪಿದೆ.

‘ಆಧಾರ್ ಮೂಲಕ ಯುಪಿಐ ಪೇಮೆಂಟ್ ಆನ್‌ಬೋರ್ಡಿಂಗ್ ಪರಿಚಯ ಮಾಡುತ್ತಿದ್ದು, ಇದರ ಮೂಲಕ ಅಪ್ಲಿಕೇಷನ್ ಬಳಕೆದಾರರ ಸಂಖ್ಯೆ ಹೆಚ್ಚಿಸುವ ಗುರಿ ಹೊಂದಲಾಗಿದೆ. ದೇಶದ ಶೇಕಡ 99.9ರಷ್ಟು ವಯಸ್ಕರು ಆಧಾರ್ ಕಾರ್ಡ್ ಹೊಂದಿದ್ದು, ಅವರನ್ನೂ ಡಿಜಿಟಲ್ ಪಾವತಿಯತ್ತ ಕರೆತರುವುದು ನಮ್ಮ ಉದ್ದೇಶ ಎಂದು ಗೂಗಲ್ ಹೇಳಿದೆ.

‘ದೇಶದಲ್ಲಿ ಇನ್ನೂ ಕೋಟ್ಯಂತರ ಮಂದಿ ಡಿಜಿಟಲ್ ಪಾವತಿಯತ್ತ ಸುಳಿದಿಲ್ಲ. ಅವರೆಲ್ಲರನ್ನೂ ಆಧಾರ್ ಕಾರ್ಡ್ ಮೂಲಕ, ಯಾವುದೇ ಡೆಬಿಟ್ ಕಾರ್ಡ್ ಇಲ್ಲದಿದ್ದರೂ ಸಹ ಯುಪಿಐ ಐಡಿ ಕ್ರಿಯೇಟ್ ಮಾಡುವ ಸೌಲಭ್ಯದಿಂದ ಭಾರತದಲ್ಲಿ ಇನ್ನು ನೂರು ಮಿಲಿಯನ್ ಬಳಕೆದಾರರನ್ನು ತನ್ನ ಗ್ರಾಹಕರನ್ನಾಗಿ ಪಡೆಯಬಹುದು. ಅವರ ಡಿಜಿಟಲ್ ಪೇಮೆಂಟ್ ಪ್ರಕ್ರಿಯೆ ವಿಧಾನವನ್ನು ಇನ್ನಷ್ಟು ಸುಲಭಗೊಳಿಸಲಾಗಿದೆ. ಬ್ಯಾಂಕ್ ಖಾತೆ ಹೊಂದಿರುವವರಿಗೆ ಮಾತ್ರ ಈ ಫೀಚರ್ ನೆರವಾಗಲಿದೆ’ ಎಂದಿದೆ. ಡೆಬಿಟ್ ಕಾರ್ಡ್ ಇಲ್ಲದೆಯೂ ಗೂಗಲ್ ಪೇ ಬಳಸಲು, ಸೈನ್ ಆಗುವ ಮಾದರಿಯನ್ನು ಪಡೆಯಲು ಮೊದಲು ಬಳಕೆದಾರರು ಆಧಾರ್ ಕಾರ್ಡ್ ಮತ್ತು ಬ್ಯಾಂಕ್ ಖಾತೆ ಎರಡಕ್ಕೂ ಒಂದೇ ಮೊಬೈಲ್ ನಂಬರ್ ಲಿಂಕ್ ಆಗಿರುವ ಬಗ್ಗೆ ಖಾತರಿ ಮಾಡಿಕೊಳ್ಳಬೇಕು. ಒಂದು ವೇಳೆ ಲಿಂಕ್ ಆಗದಿದ್ದಲ್ಲಿ, ಲಿಂಕ್ ಮಾಡಿಸಬೇಕು. ನಂತರ ಬಳಕೆದಾರರು ಗೂಗಲ್ ಪೇಗೆ ಲಾಗಿನ್ ಆಗಿ ಬಳಸಬಹುದು.

### ಮಾಡುವ ವಿಧಾನ

- ಗೂಗಲ್ ಪೇ ಅಪ್ಲಿಕೇಷನ್ ಇನ್‌ಸ್ಟಾಲ್ ಮಾಡಿಕೊಳ್ಳಬೇಕು.
- ಇನ್‌ಸ್ಟಾಲ್ ಆದ ಬಳಿಕ ಡೆಬಿಟ್/ಎಟಿಎಂ ಕಾರ್ಡ್ ಮತ್ತು ಆಧಾರ್ ಕಾರ್ಡ್ ಮೂಲಕ ವೆರಿಫೈ ಮಾಡಲು ಆಯ್ಕೆ ಕೇಳಲಾಗುತ್ತದೆ.
- ಈ ಹಂತದಲ್ಲಿ ಗ್ರಾಹಕರು ಆಧಾರ್ ಕಾರ್ಡ್ ವೆರಿಫಿಕೇಷನ್ ಆಯ್ದುಕೊಳ್ಳಬೇಕು.
- ನಂತರ ಆಧಾರ್ ಕಾರ್ಡಿನ ಮೊದಲ 6 ಸಂಖ್ಯೆ ನಮೂದಿಸಬೇಕು.
- ಬಳಿಕ ಪೇಮೆಂಟ್ ಪ್ರಕ್ರಿಯೆಗೆ ಸೆಕ್ಯೂರಿಟಿ ಪಿನ್ ರಚಿಸಬೇಕು.
- ಪಿನ್ ರಚಿಸಲು ನಿಮ್ಮ ಮೊಬೈಲ್‌ಗೆ ಬರುವ ಒಟಿಪಿ ಎಂಟ್ರಿ ಮಾಡಬೇಕು.
- ನಂತರ, ಬ್ಯಾಂಕಿನಿಂದ ಪ್ರತ್ಯೇಕ ಒಟಿಪಿ ಬರುತ್ತದೆ. ಅದನ್ನೂ ನೀಡಬೇಕು.
- ಒಟಿಪಿ ವೆರಿಫಿಕೇಷನ್ ಮುಗಿದ ನಂತರ, ನೀವು 6 ಡಿಜಿಟ್‌ನ ಯುಪಿಐ ಪಿನ್ ಸೆಟಪ್ ಮಾಡಬೇಕು.

ಯುಪಿಐ ಐಡಿ ಕ್ರಿಯೇಟ್ ಆದ ನಂತರ, ಗೂಗಲ್ ಪೇ ಮೂಲಕವೇ ನಿಮ್ಮ ಬ್ಯಾಂಕ್ ಖಾತೆ ಬ್ಯಾಲೆನ್ಸ್, ಹಣ ವರ್ಗಾವಣೆ, ಹಣ ಸ್ವೀಕರಿಸುವ ಸೇವೆಗಳನ್ನು ಬಳಸಬಹುದು. ಈ ಪ್ರಕ್ರಿಯೆಯಲ್ಲಿ ಗೂಗಲ್, ಗ್ರಾಹಕರ ಆಧಾರ್ ಸಂಖ್ಯೆಯನ್ನು ಸಂಗ್ರಹಿಸುವುದಿಲ್ಲ. ಇದು ಎನ್‌ಪಿಸಿಐ ಮೂಲಕ ಯುಐಡಿಎಐಗೆ ವ್ಯಾಲಿಡೇಷನ್ ಮಾತ್ರ ಕಳುಹಿಸಲಾಗಿರುತ್ತದೆ.

## ವಾಟ್ಸ್‌ಆ್ಯಪ್: ಸ್ಪ್ಯಾಮ್ ಕರೆ ತಡೆಗೆ ಕ್ರಮ

ಅನಾಮಿಕ ಕರೆಗಳು ಸೇರಿದಂತೆ ಸ್ಪ್ಯಾಮ್ ಕರೆಗಳಿಗೆ ಕಡಿವಾಣ ಹಾಕಲು ವಾಟ್ಸ್‌ಆ್ಯಪ್ ‘ಸೈಲೆನ್ಸ್ ಅನ್‌ನೋನ್ ಕಾಲರ್ಸ್’ (Silence Unknown Callers) ಎಂಬ ಫೀಚರ್ ಪರಿಚಯಿಸಿದೆ.

ದೀರ್ಘ ಕಾಲದವರೆಗೆ ಪ್ರಾಯೋಗಿಕ ಪರೀಕ್ಷಾ ಹಂತದಲ್ಲಿದ್ದ ಈ ಫೀಚರ್ ಈಚೆಗೆ ಬಿಡುಗಡೆಗೊಂಡಿದೆ. ಆ್ಯಂಡ್ರಾಯ್ಡ್ ಮತ್ತು ಐಒಎಸ್ ಸ್ಮಾರ್ಟ್‌ಫೋನ್ ಬಳಕೆದಾರರು ಇದನ್ನು ಬಳಸಬಹುದಾಗಿದ್ದು, ಅದಕ್ಕಾಗಿ ವಾಟ್ಸ್‌ಆ್ಯಪ್ ಅಪ್‌ಡೇಟ್ ಮಾಡಿಕೊಳ್ಳಬೇಕಿದೆ.

ಯಾವ್ಯಾವುದೋ ಲಿಂಕ್‌ಗಳನ್ನು ಕ್ಲಿಕ್ಕಿಸಿ, ಆ್ಯಪ್‌ಗಳನ್ನು ಇನ್‌ಸ್ಟಾಲ್ ಮಾಡಿಕೊಳ್ಳುವುದರಿಂದ ನಮ್ಮ ಮೊಬೈಲ್ ಸಂಖ್ಯೆ ಸೇರಿದಂತೆ ವೈಯಕ್ತಿಕ ಮಾಹಿತಿಯನ್ನು ಸಂಗ್ರಹಿಸುವ ಅನಧಿಕೃತ ಕಂಪನಿಗಳು, ಆ ಮಾಹಿತಿಯನ್ನು ಪ್ರಮೋಷನ್ ಕಂಪನಿಗಳಿಗೆ ಮಾರಾಟ ಮಾಡುತ್ತವೆ. ಹೀಗೆ ಮೊಬೈಲ್ ಸಂಖ್ಯೆಯ ಮಾಹಿತಿ ಪಡೆಯುವ ಪ್ರಮೋಷನ್ ಕಂಪನಿಗಳು ವಾಟ್ಸ್‌ಆ್ಯಪ್ ಕರೆ, ಮೆಸೇಜ್ ಮಾಡಿ ಕಿರಿಕಿರಿ ಉಂಟುಮಾಡುತ್ತವೆ. ಇದರ ತಡೆಗೆ ಹೊಸ ಫೀಚರ್ ಕ್ರಮವಹಿಸಲಿದೆ.

ಪ್ರೈವೆಸಿ ಸೆಟ್ಟಿಂಗ್ ಮೆನುವಿನಲ್ಲಿ ಈ ಫೀಚರ್ ಲಭ್ಯವಿದ್ದು, ಇದನ್ನು ಆನ್ ಮಾಡಿಕೊಂಡರೆ ಸ್ಪ್ಯಾಮ್ ಹಾಗೂ ಅನಾಮಿಕ ಕರೆಗಳು ತಾನಾಗಿಯೇ ಬಂದ್ ಆಗಲಿವೆ.

## ಐಫೋನ್ ಕಾರ್ಯಾಚರಣೆಗೆ ಹೊಸ ಶಕ್ತಿ

ಆ್ಯಪಲ್ ಕಂಪನಿಯು ಈಚೆಗೆ ಐಒಎಸ್ 17 ಕಾರ್ಯಾಚರಣಾ ವ್ಯವಸ್ಥೆಯನ್ನು (ಐಒಎಸ್) ಬಿಡುಗಡೆ ಮಾಡಿದ್ದು, ಕಂಪನಿಯ ಎಲ್ಲ ಉತ್ಪನ್ನಗಳಿಗೆ ಇದು ಹೊಸ ಶಕ್ತಿ ತುಂಬಲಿದೆ. ಹೊಸ ಐಒಎಸ್‌ನಿಂದ ವೈಯಕ್ತಿಕ ಮಾಹಿತಿ ಸುರಕ್ಷತೆಗೆ ಇನ್ನಷ್ಟು ಆದ್ಯತೆ ನೀಡಲಾಗಿದ್ದು, ಇದು ಐಫೋನ್ ಮೇಲಿನ ನಂಬಿಕೆಯನ್ನು ಹೆಚ್ಚಿಸಿದೆ.

ನೇಮ್ ಡ್ರಾಪ್, ಸ್ಟ್ಯಾಂಡ್‌ಬೈ ಮೋಡ್, ಇಂಟರಾಕ್ಟಿವ್ ವಿಜೆಟ್ಸ್ ಸೇರಿದಂತೆ ಹಲವು ಫೀಚರ್‌ಗಳು ಹೊಸ ಐಒಎಸ್‌ನಲ್ಲಿ ಲಭ್ಯವಿದೆ. ಡು ಮೋರ್ ವಿತ್ ದಿ ಮೆಸೇಜ್, ‘ಡಕ್ಕಿಂಗ್’ ಆಟೊಕರೆಕ್ಷನ್ ಫೀಚರ್‌ಗಳು ಲಭ್ಯವಿದ್ದು, ಜೊತೆಗೆ ವಿಡಿಯೊ ಕರೆಯಲ್ಲೂ ಹಲವು ಬದಲಾವಣೆಗಳನ್ನು ತರಲಾಗಿದೆ.

ಕೆಲ ಮೋಡ್ ಮತ್ತು ಹಾರ್ಡ್‌ವೇರ್ ಸಾಮರ್ಥ್ಯಗಳ ಆಧಾರದಲ್ಲಿ ಕೆಲವು ಐಫೋನ್‌ಗಳು ಈ ಐಒಎಸ್ 17 ಅಪ್‌ಡೇಟ್ ಪಡೆಯಬಹುದಾಗಿದೆ. ಆದಾಗ್ಯೂ ಆ್ಯಪಲ್‌ನ ಕೆಲ ನಿರ್ದಿಷ್ಟ ಐಫೋನ್‌ಗಳಲ್ಲಿ ಮಾತ್ರ ಹೊಸ ವರ್ಷನ್ ಕಾರ್ಯನಿರ್ವಹಿಸಲಿದೆ.